# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016-17ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 53 (6) ರ ರೇಷ್ಮೆ ಉದ್ಯಮದ ಸಮಗ್ರ ಅಧ್ಯಯನ ಕುರಿತು.

**ಓದಲಾಗಿದೆ:**

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪತ್ರ ಸಂಖ್ಯೆ: ಯೋಜನೆ/ಪಿಎಸ್.1/ಹೊಕಾ-ರೇ.ಉ.ಸ.ಅ/8/2016-17, ದಿನಾಂಕ 13/16-04-2016

**ಪ್ರಸ್ತಾವನೆ:**

2016-17ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-53 ರಲ್ಲಿ ಈ ಕೆಳಕಂಡಂತೆ ಘೋಷಿಸಲಾಗಿದೆ:

53. ರೇಷ್ಮೆ ಅಮದು ಸುಂಕವನ್ನು ಶೇ. 15 ರಿಂದ ಶೇ. 10ಕ್ಕೆ ಇಳಿಸಿದ್ದರಿಂದಾಗಿ ರೇಷ್ಮೆ ಮಾರುಕಟ್ಟೆಯಲ್ಲಿ ಪ್ರತಿಕೂಲ ಪರಿಸ್ಥಿತಿ ಉದ್ಭವಿಸಿ, ಕಳೆದ ವರ್ಷ ರೇಷ್ಮೆ ಬೆಳೆಗಾರರು ಹಾಗೂ ರೀಲರುಗಳು ಆತಂಕಕ್ಕೆ ಒಳಗಾಗಿದ್ದರು. ಮಾರುಕಟ್ಟೆ ದರಗಳು ಉತ್ಪಾದನಾ ವೆಚ್ಚ ಭರಿಸಬೇಕೆಂಬುದು ರೇಷ್ಮೆ ಬೆಳೆಗಾರರು ಮತ್ತು ರೀಲರುಗಳ ನಿರೀಕ್ಷೆಯಾಗಿತ್ತು. ಈ ಹಿನ್ನಲೆಯಲ್ಲಿ ರೇಷ್ಮೆಗೂಡು, ಕಚ್ಚಾ ರೇಷ್ಮೆ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ತಂತ್ರಗಾರಿಕೆ ಕುರಿತು ಪರಿಶೀಲಿಸಲು ಕೃಷಿ ಅರ್ಥಶಾಸ್ತ್ರ ಪ್ರೊಫೆಸರ್ ಡಾ: ಎಚ್. ಬಸವರಾಜ್ ಅವರ ನೇತೃತ್ವದ ತಾಂತ್ರಿಕ ಸಮಿತಿಯನ್ನು ರಚಿಸಲಾಯಿತು. ಈ ತಾಂತ್ರಿಕ ಸಮಿತಿಯು ರೇಷ್ಮೆ ಕೃಷಿಯ ವಿವಿಧ ಆಯಾಮಗಳನ್ನು ಪರಿಶೀಲಿಸಿ, ವರದಿ ಸಲ್ಲಿಸಿದೆ. ನಮ್ಮ ಸರ್ಕಾರವು ಈ ಸಮಿತಿಯ ವರದಿಯನ್ನು ಪರಿಶೀಲಿಸಿದೆ. ಅದಕ್ಕನುಗುಣವಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗುವುದು:

> ನಮ್ಮ ಸರ್ಕಾರವು ಸಮಗ್ರ ಅಧ್ಯಯನ ಆಧರಿಸಿ ರೇಷ್ಮೆ ಉದ್ಯಮದ ದೀರ್ಘಾವಧಿಯ ಅಭಿವೃದ್ಧಿಗಾಗಿ ಭವಿಷ್ಯದ ಯೋಜನೆಯನ್ನು ರೂಪಿಸುವ ಇಚ್ಛೆಯನ್ನು ಹೊಂದಿದೆ. ಅದಕ್ಕಾಗಿ ರೇಷ್ಮೆ ಉದ್ಯಮದ ಸಮಗ್ರ ಅಧ್ಯಯನವನ್ನು ಕೈಗೊಳ್ಳಲು ಉದ್ದೇಶಿಸಿದೆ.

ರೇಷ್ಮೆ ಉದ್ಯಮವು ಕೃಷಿ ಮೂಲದ ಗುಡಿ ಕೈಗಾರಿಕೆಯಾಗಿದ್ದು, ಹಿಪ್ಪುನೇರಳೆ ವ್ಯವಸಾಯ, ರೇಷ್ಮೆ ಹುಳು ಸಾಕಣೆ, ರೇಷ್ಮೆ ಗೂಡುಗಳ ನೂಲು ಬಿಚ್ಚಾಣಿಕೆ ಚಟುವಟಿಕೆಗಳನ್ನು ಒಳಗೊಂಡಿದೆ. ಸುಮಾರು 1.30 ಲಕ್ಷ ರೇಷ್ಮೆ ಬೆಳೆಗಾರರು ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಮತ್ತು 7000 ರೀಲರುಗಳು ರೇಷ್ಮೆ ನೂಲು ಬಿಚ್ಚಾಣಿಕೆ ಕೈಗಾರಿಕೆಯಲ್ಲಿ ತೊಡಗಿಕೊಂಡಿರುತ್ತಾರೆ. ರಾಜ್ಯದಲ್ಲಿ ಪ್ರತಿದಿನ ಸುಮಾರು 150 ಮೆ.ಟನ್ ರೇಷ್ಮೆ ಗೂಡು ಉತ್ಪಾದನೆಯಾಗಿ ವಹಿವಾಟಾಗುತ್ತಿದೆ. ಉತ್ಪಾದನೆಯಾದ ಎಲ್ಲಾ ಗೂಡುಗಳನ್ನು ಉಪಯೋಗಿಸಿ ರೇಷ್ಮೆ ನೂಲು ಬಿಚ್ಚಾಣಿಕೆದಾರರು ಕಚ್ಚಾ ರೇಷ್ಮೆಯನ್ನು ಉತ್ಪಾದಿಸುತ್ತಿದ್ದಾರೆ.

ಬಹಿರಂಗ ಹರಾಜು ಪದ್ಧತಿಯಲ್ಲಿ ರೇಷ್ಮೆ ಗೂಡು ಮಾರುಕಟ್ಟೆಗಳು ಹಾಗೂ ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ರೇಷ್ಮೆ ಗೂಡು ಮತ್ತು ಕಚ್ಚಾ ರೇಷ್ಮೆಯ ದರಗಳನ್ನು ನಿಗಧಿಪಡಿಸಲಾಗುತ್ತದೆ. ರೇಷ್ಮೆ ಗೂಡಿನ ಧಾರಣೆಯು ಕಚ್ಚಾ ರೇಷ್ಮೆಯ ಸರಬರಾಜು ಮತ್ತು ಬೇಡಿಕೆಯನ್ನು ಅವಲಂಬಿಸಿರುತ್ತದೆ. ಮಾರುಕಟ್ಟೆಯಲ್ಲಿ ಯಾವುದೇ ರೀತಿಯ ಕುಸಿತ ಕಚ್ಚಾ ರೇಷ್ಮೆಯ ಧಾರಣೆಯಲ್ಲಿ ಉಂಟಾದಲ್ಲಿ ರೇಷ್ಮೆ ಬೆಳೆಗಾರರು ಮತ್ತು ರೇಷ್ಮೆ ನೂಲು ಬಿಚ್ಚಾಣಿಕೆದಾರರ ಮೇಲೆ ನೇರವಾದ ಪರಿಣಾಮ ಬೀರುತ್ತದೆ. ಇಂತಹ ಸನ್ನಿವೇಶಗಳಲ್ಲಿ ರೇಷ್ಮೆ ಬೆಳೆಗಾರರು ಮತ್ತು ರೇಷ್ಮೆ ನೂಲು ಬಿಚ್ಚಾಣಿಕೆದಾರರು ತುಂಬಾ ನಷ್ಟ ಹೊಂದುವಂತಹ ಸ್ಥಿತಿಗೆ ತಲುಪುತ್ತಾರೆ. ಪ್ರತಿಕೂಲ ಮಾರುಕಟ್ಟೆ ವ್ಯವಹಾರವು ಕಚ್ಚಾ ರೇಷ್ಮೆ ಉತ್ಪಾದನೆ, ದರ ಮತ್ತು ಸ್ವಾಮ್ಯಾರದ ಮೇಲೆ ನೇರವಾದ ಪರಿಣಾಮ ಬೀರುತ್ತದೆ. ಗುಣಮಟ್ಟ ಆಧಾರದ ಕಚ್ಚಾ ರೇಷ್ಮೆ ಉತ್ಪಾದನೆಯನ್ನು ಯೋಜಿಸಬೇಕಾಗಿದೆ.

ಮು.ತಿ.ನೋ. . . .

2015-16ನೇ ಸಾಲಿನಲ್ಲಿ ರೇಷ್ಮೆ ಗೂಡು ಮತ್ತು ಕಚ್ಚಾ ರೇಷ್ಮೆ ಧಾರಣೆಗಳಲ್ಲಿ ಕುಸಿತ ಉಂಟಾಗಿ ಸುಮಾರು 9 ತಿಂಗಳುಗಳ ಕಾಲ ಧಾರಣೆಗಳಲ್ಲಿ ಸುಧಾರಣೆ ಕಂಡು ಬಂದಿರುವುದಿಲ್ಲ. ಈ ಅವಧಿಯಲ್ಲಿ ರೇಷ್ಮೆ ಭಾಗೀದಾರರುಗಳು ಸಂಕಷ್ಟಕ್ಕೆ ಒಳಗೊಂಡಿರುವುದನ್ನು ಮನಗಂಡು ಇದಕ್ಕೆ ಕಾರಣಗಳನ್ನು ಅವಲೋಕಿಸಲು ಉದ್ದಿಮೆಯ ಸಮಗ್ರ ಅಧ್ಯಯನ ಕೈಗೊಳ್ಳಲು 2016-17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿದೆ. ಈವರೆವಿಗೆ ತಿಳಿದಿರುವಂತೆ, ಕಚ್ಚಾ ರೇಷ್ಮೆ ಪರಿಮಾಣ ಮತ್ತು ಗುಣಮಟ್ಟದ ಬೇಡಿಕೆ, ಸರಬರಾಜು, ಸ್ಥಳೀಯ(ಮಾರುಕಟ್ಟೆಯ) ಅವಶ್ಯಕತೆ, ಕಚ್ಚಾ ರೇಷ್ಮೆಯ ಆಮದು ಮತ್ತು ದರ ವಿಶ್ಲೇಷಣೆಯನ್ನು ಒಳಗೊಂಡ ಮಾರುಕಟ್ಟೆ ವಿಶ್ಲೇಷಣೆಯ ಅಧ್ಯಯನವನ್ನು ಕೈಗೊಂಡಿರುವುದಿಲ್ಲ. ಆದ್ದರಿಂದ, ರೇಷ್ಮೆ ಉದ್ಯಮದ ದೀರ್ಘಾವಧಿಯ ಅಭಿವೃದ್ಧಿಗಾಗಿ ಭವಿಷ್ಯದ ಯೋಜನೆಯನ್ನು ರೂಪಿಸುವ ಸಲುವಾಗಿ ಸಮಗ್ರ ಅಧ್ಯಯನ ಕೈಗೊಳ್ಳಲು ಉದ್ದೇಶಿಸಿದೆ.

ಪ್ರಸ್ತುತ ಸನ್ನಿವೇಶದಲ್ಲಿ ಕಚ್ಚಾ ರೇಷ್ಮೆಯ ಸಂಶೋಧನೆ ಮತ್ತು ವಿಶ್ಲೇಷಣೆ ಪ್ರತಿದಿನದ ಅವಶ್ಯಕತೆಯಾಗಿದೆ. ಆದುದರಿಂದ ದೀರ್ಘಾವಧಿಯ ಉದ್ಯಮದ ಅಭಿವೃದ್ಧಿಗಾಗಿ ಸಮಗ್ರ ಅಧ್ಯಯನವನ್ನು ಕೆಳಕಂಡ ಅಂಶಗಳ ಮೇಲೆ ಕೈಗೊಳ್ಳಲು ಪ್ರಸ್ತಾಪಿಸಿದೆ.

1) ಕಚ್ಚಾ ರೇಷ್ಮೆಯ ಬೇಡಿಕೆ ಮತ್ತು ಸರಬರಾಜು:
   - ಮನೆ ಬಳಕೆ/ಸ್ಥಳೀಯ ಹಂತ ಮತ್ತು ರಾಷ್ಟ್ರೀಯ ಹಂತ(ರಫ್ತು)

2) ಗುಣಮಟ್ಟದ ಕಚ್ಚಾ ರೇಷ್ಮೆ ಉತ್ಪಾದನೆಯ ಹಂತಗಳು:
   - ಹಿಪ್ಪುನೇರಳೆ ವಿಸ್ತೀರ್ಣ-ಗೂಡು ಉತ್ಪಾದನೆ-ರೀಲಿಂಗ್ ಯಂತ್ರೋಪಕರಣಗಳು

3) ಕಚ್ಚಾ ರೇಷ್ಮೆ ಪರಿಮಾಣ, ಗುಣಮಟ್ಟದ ಅವಶ್ಯಕತೆ:
   * ಕೈಮಗ್ಗಗಳು-ವಿದ್ಯುತ್ ಮಗ್ಗಗಳು-ವಿನ್ಯಾಸ ಮತ್ತು ಶೈಲಿ
   * ಉತ್ಪನ್ನ ವಲಯ, ವಿಭಿನ್ನತೆ ಮತ್ತು ಬೇಡಿಕೆ ವಿಶ್ಲೇಷಣೆ

~~4) ಕಚ್ಚಾ ರೇಷ್ಮೆ ಆಮದು/ದರ ಪ್ರವೃತ್ತಿ ವಿಶ್ಲೇಷಣೆ ಮತ್ತು ಮುನ್ಸೂಚನೆ~~

5) ರೇಷ್ಮೆ ಮತ್ತು ರೇಷ್ಮೆ ಉತ್ಪನ್ನಗಳ ರಫ್ತು

6) ಸರಬರಾಜು ಸರಪಳಿಯ ಅಭಿವೃದ್ಧಿ ಮತ್ತು ಸಾಂಸ್ಥೀಕರಣ

ಸದರಿ ಅಧ್ಯಯನವನ್ನು ಪ್ರತಿಷ್ಠಿತ ಬಾಹ್ಯ ಸಂಸ್ಥೆಯಿಂದ ಕೈಗೊಳ್ಳಲಾಗುವುದು.

ಇದರಿಂದ ಸಮರ್ಪಕ ರೀತಿಯಲ್ಲಿ ಗುಣಮಟ್ಟದ ರೇಷ್ಮೆ ಗೂಡು ಮತ್ತು ಕಚ್ಚಾ ರೇಷ್ಮೆ ಉತ್ಪಾದನೆ, ಬೇಡಿಕೆಯನ್ವಯ ಸರಬರಾಜು ಕೈಗೊಳ್ಳಲು ಮತ್ತು ಬೆಲೆ ಸ್ಥಿರೀಕರಿಸಲು ಸಾಧ್ಯವಾಗುವುದು. ಅಂತರಾಷ್ಟ್ರೀಯ ಗುಣಮಟ್ಟದ ಕಚ್ಚಾ ರೇಷ್ಮೆ ಉತ್ಪಾದನೆಗೆ ಭವಿಷ್ಯದ ಯೋಜನೆಯನ್ನು ರೂಪಿಸಲು ಅನುಕೂಲವಾಗುತ್ತದೆ. ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ರೂ.50.00 ಲಕ್ಷಗಳ ಅನುದಾನದ ಅವಶ್ಯಕತೆ ಇದ್ದು, ಈ ವೆಚ್ಚವನ್ನು ಯೋಜನಾ ಲೆಕ್ಕ ಶೀರ್ಷಿಕೆ ಕರ್ನಾಟಕ ರೇಷ್ಮೆ ವ್ಯವಸಾಯ ಯೋಜನೆ 2851-00-107-1-80 ರಡಿ ಒದಗಿಸಿರುವ ರೂ. 5142.00 ಲಕ್ಷಗಳಿಂದ ಭರಿಸುವುದಾಗಿ ಮತ್ತು ಈ ಯೋಜನೆಯ ಫಲಾನುಭವಿಗಳು ರೇಷ್ಮೆ ಭಾಗೀದಾರರೆಂದು ತಿಳಿಸುತ್ತಾ, ಸದರಿ ಹೊಸ ಕಾರ್ಯಕ್ರಮದ ಅನುಷ್ಠಾನಗೊಳಿಸಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡುವಂತೆ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಕೋರಿರುತ್ತಾರೆ.

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ರೇಷ್ಮೆ ಉದ್ಯಮದ ಸಮಗ್ರ ಅಧ್ಯಯನವನ್ನು ಕೈಗೊಳ್ಳುವ ಹೊಸ ಕಾರ್ಯಕ್ರಮವನ್ನು ರೂ. 50.00 ಲಕ್ಷಗಳಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲು ಮತ್ತು ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2851-00-107-1-80 – ಕರ್ನಾಟಕ ರೇಷ್ಮೆ

ಮು.ತಿ.ನೋ. . . .

ವ್ಯವಸಾಯ ಯೋಜನೆಯಡಿ ಒದಗಿಸಿರುವ ರೂ. 5142.00 ಲಕ್ಷಗಳಿಂದ ಭರಿಸಲು ಸರ್ಕಾರವು ನಿರ್ಧರಿಸಿರುವ ಕಾರಣ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ತೋಇ 77 ರೇಕೃವಿ 2016,**
**ಬೆಂಗಳೂರು, ದಿನಾಂಕ 11-07-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ರೇಷ್ಮೆ ಉದ್ಯಮದ ಸಮಗ್ರ ಅಧ್ಯಯನವನ್ನು ಕೈಗೊಳ್ಳುವ ಹೊಸ ಕಾರ್ಯಕ್ರಮವನ್ನು ರೂ. 50.00 ಲಕ್ಷ (ಐವತ್ತು ಲಕ್ಷಗಳು ಮಾತ್ರ) ಗಳಲ್ಲಿ ಅನುಷ್ಠಾನಗೊಳಿಸಲು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಈ ವೆಚ್ಚವನ್ನು 2016-17ನೇ ಸಾಲಿನ ಲೆಕ್ಕ ಶೀರ್ಷಿಕೆ 2851-00-107-1-80 – ಕರ್ನಾಟಕ ರೇಷ್ಮೆ ವ್ಯವಸಾಯ ಯೋಜನೆಯಡಿ ಒದಗಿಸಿರುವ ರೂ. 5142.00 ಲಕ್ಷಗಳಿಂದ ಭರಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 22 ಎಫ್‌ಆರ್‌ಓ 2016, ದಿನಾಂಕ 24-06-2016 ರ ಸಹಮತಿ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 312 ವೆಚ್ಚ-4/2016, ದಿನಾಂಕ 14-06-2016 ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಆರ್. ಎಲ್. ಚಿನ್ನಮ್ಮ 11/7
(ಆರ್.ಎಲ್. ಚಿನ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ (ರೇಷ್ಮೆ)
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ)/(ಎ&ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ 1 & 2, ವಿಧಾನ ಸೌಧ, ಬೆಂಗಳೂರು
5. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಹಿರಿಯ ನಿರ್ದೇಶಕರು/ನಿರ್ದೇಶಕರು, ಯೋಜನಾ ಇಲಾಖೆ, ಯೋಜನಾ ಸಂಯೋಜನಾ ಮತ್ತು ಮಾಹಿತಿ ವಿಭಾಗ/ಪಿ.ಎಫ್.ಆರ್. ವಿಭಾಗ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಆಂತರಿಕ ಆರ್ಥಿಕ ಸಲಹೆಗಾರರು ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಹಾಗೂ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ಜಿಲ್ಲಾ ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನ ಸೌಧ, ಬೆಂಗಳೂರು.
11. ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
12. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
13. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು (ರೇಷ್ಮೆ), ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
14. ಶಾಖಾ ರಕ್ಷಾ ಕಡತ.